**ಅಜ್ಞಾನಸ್ಯ ಚ ಮಿಥ್ಯಾತ್ವಂ ಅಜ್ಞಾನಾದಿತಿ ಕಲ್ಪನೇ ।**
**ಅನವಸ್ಥಿತಿಸ್ತಥಾ ಚ ಸ್ಯಾದನ್ಯೋನ್ಯಾಶ್ರಯತಾಽಥವಾ ॥**

**ಅನ್ವಯಾರ್ಥ :**

ಅಜ್ಞಾನಸ್ಯ= ಅವಿದ್ಯೆಗೆ, ಮಿಥ್ಯಾತ್ವಂ ಚ= ಮಿಥ್ಯಾತ್ವವಾದರೋ (ಆತ್ಮನಲ್ಲಿ ಆರೋಪವು), ಅಜ್ಞಾನಾತ್= ಇನ್ನೊಂದು ಅವಿದ್ಯೆಯಿಂದ, ಇತಿ= ಹೀಗೆ, ಕಲ್ಪನೇ= ಕಲ್ಪಿಸಿದರೆ, ಅನವಸ್ಥಿತಿಃ= ಅನವಸ್ಥಾದೋಷವು ಬರುತ್ತದೆ. ತಥಾ ಚ ಸತಿ= ಮೊದಲನೆಯ ಅಜ್ಞಾನವು ಎರಡನೆಯ ಅಜ್ಞಾನಕ್ಕೆ ಕಾರಣ ಎಂದು ಹೇಳಿದರೆ, ಅನ್ಯೋನ್ಯಾಶ್ರಯತಾ= 'ಅನ್ಯೋನ್ಯಾಶ್ರಯ' ಎಂಬ ದೋಷ ಬರುತ್ತದೆ. ಅಥವಾ= ಒಂದೇ ಅಜ್ಞಾನವು ತನಗೆ ತಾನೇ ಕಾರಣ ಎಂದರೆ (ಆತ್ಮಾಶ್ರಯತಾ= ಆತ್ಮಾಶ್ರಯದೋಷ ಬರುತ್ತದೆ).

**ಭಾವಾರ್ಥ :**

ಈ ಜಗತ್ತಿಗೆ ಅಜ್ಞಾನವೇ ಕಾರಣವೆಂದು ಒಪ್ಪಿಕೊಂಡರೂ ಅಜ್ಞಾನದಿಂದ ಹುಟ್ಟಿದ ಜಗತ್ತು ಅಸತ್ಯ ಏಕಾಗಬೇಕು? ಅಜ್ಞಾನವು ಅಸತ್ಯವಾದುದರಿಂದ ಅದರಿಂದಾದ ಜಗತ್ತು ಅಸತ್ಯ ಎನ್ನುವುದಂತೂ ಸರಿಯಲ್ಲ. ಅಜ್ಞಾನವಾದರೂ ಅಸತ್ಯವೇಕೆ? 'ಅಜ್ಞಾನವೂ, ಹಗ್ಗದ ಹಾವಿನಂತೆ, ಅಜ್ಞಾನಕಲ್ಪಿತವಾದುದರಿಂದ ಅಸತ್ಯ' ಎಂದರೆ ಅನವಸ್ಥಾ. ಜಗತ್ತಿಗೆ ಕಾರಣವಾದ ಅಜ್ಞಾನವು ಮತ್ತೊಂದು ಅಜ್ಞಾನದಿಂದ ಕಲ್ಪಿತ, ಅದು ಇನ್ನೊಂದರಿಂದ, ಹೀಗೆ.

ಮೊದಲ ಅಜ್ಞಾನ ಎರಡನೆಯದರಿಂದ, ಎರಡನೆಯದು ಮೊದಲನೆಯದರಿಂದ ಕಲ್ಪಿತ ಎಂದರೆ, ಅನ್ಯೋನ್ಯಾಶ್ರಯದೋಷ.

ಒಂದೇ ಅಜ್ಞಾನವಿದ್ದು ಅದರಿಂದ ಈ ಜಗತ್ತು, ತಾನೂ ಕಲ್ಪಿತವೆಂದರೆ ಆತ್ಮಾಶ್ರಯದೋಷ.

## ಭಾವರೂಪವಾದ ಅಜ್ಞಾನದ ಸಮರ್ಥನೆ

**ಸ್ವಭಾವಾಜ್ಞಾನವಾದಸ್ಯ ನಿರ್ದೋಷತ್ವಾನ್ನ ತದ್ಭವೇತ್ ।**

**ಅನ್ವಯಾರ್ಥ :**

1. ಸ್ವಭಾವಾಜ್ಞಾನವಾದಸ್ಯ- ಸ್ವಭಾವ= ಜೀವನಿಗೆ, ಅಜ್ಞಾನ= ಅಜ್ಞಾನವಿದೆ ಎಂಬ ವಾದಸ್ಯ= ವಾದಕ್ಕೆ, ನಿರ್ದೋಷತ್ವಾತ್= 'ಅಜ್ಞಾನಕ್ಕೆ ಆಶ್ರಯವಿಲ್ಲ' ಎಂಬ ದೋಷವಿಲ್ಲದುದರಿಂದ, ತತ್= ಶಾಸ್ತ್ರವ್ಯರ್ಥ ಎಂಬ ಆಕ್ಷೇಪವು, ನ ಭವೇತ್= ಆಗುವುದಿಲ್ಲ.

2. ಸ್ವಭಾಜ್ಞಾನವಾದಸ್ಯ= ಅಜ್ಞಾನವು ಸ್ವಾಭಾವಿಕ, ಸತ್ಯ, ಅಜ್ಞಾನಕಲ್ಪಿತವಲ್ಲ ಎಂಬ ದ್ವೈತವಾದಕ್ಕೆ, ನಿರ್ದೋಷತ್ವಾತ್= ಅನ್ಯೋನ್ಯಾಶ್ರಯಾದಿ ದೋಷವಿಲ್ಲದಿರುವುದರಿಂದ, ನ ತತ್ ಭವೇತ್= ಶಾಸ್ತ್ರವೈಯರ್ಥ್ಯವಿಲ್ಲ.

3. ಸ್ವಭಾವಾಜ್ಞಾನವಾದಸ್ಯ- ಸ್ವಭಾವ= ಪರಮಾತ್ಮ, ಸ್ವಭಾವ= ಜೀವನ ಅಸ್ವಾತಂತ್ರ್ಯಾದಿಧರ್ಮಗಳು ಇವುಗಳ ಬಗ್ಗೆ, ಅಜ್ಞಾನ= ಅಜ್ಞಾನವಿದೆ ಎಂಬ, ವಾದಸ್ಯ= ನಮ್ಮ ವಾದಕ್ಕೆ, ನಿರ್ದೋಷತ್ವಾತ್= ಅಜ್ಞಾನಕ್ಕೆ ವಿಷಯವೇ ಇಲ್ಲ ಎಂಬ ದೋಷವಿಲ್ಲದುದರಿಂದ, ನ ತತ್ ಭವೇತ್= ಶಾಸ್ತ್ರವೈಯರ್ಥ್ಯವಿಲ್ಲ.

4. ಸ್ವಭಾವಾಜ್ಞಾನವಾದಸ್ಯ= ಜೀವನಿಗೆ ಅಜ್ಞಾನದ ಸಂಬಂಧವು ಅನಾದಿಕಾಲದಿಂದ ಸ್ವಾಭಾವಿಕ ಎಂಬ ನಮ್ಮ ವಾದಕ್ಕೆ, ನಿರ್ದೋಷತ್ವಾತ್ ನ ತತ್ ಭವೇತ್= ದೋಷವಿಲ್ಲದುದರಿಂದ ಶಾಸ್ತ್ರವೈಯರ್ಥ್ಯವು ಬರುವುದಿಲ್ಲ.

5. ಸ್ವಭಾವಾಜ್ಞಾನವಾದಸ್ಯ= ಪರಮಾತ್ಮನಿಂದಾಗಿ ಜೀವನಿಗೆ ಅಜ್ಞಾನ ಎಂಬ ವಾದಕ್ಕೆ, ನಿರ್ದೋಷತ್ವಾತ್= ದೋಷವಿಲ್ಲದುದರಿಂದ, ನ ತತ್ ಭವೇತ್= ಶಾಸ್ತ್ರವೈಯರ್ಥ್ಯವಿಲ್ಲ.

**ಭಾವಾರ್ಥ :**

ಅದ್ವೈತವಾದದಲ್ಲಿ ಒಪ್ಪಿದಂತೆಯೇ ದ್ವೈತವಾದವೂ ಭಾವರೂಪವಾದ ಅಜ್ಞಾನವಿದೆ ಎಂದು ಒಪ್ಪಿಕೊಂಡಿದೆ. ಆದರೆ ಅದ್ವೈತವಾದಕ್ಕೆ ಹೇಳಿದ ದೋಷಗಳು ದ್ವೈತವಾದದಲ್ಲಿ ಇಲ್ಲ.

1. ಅದ್ವೈತದರ್ಶನದಲ್ಲಿ ಬ್ರಹ್ಮ ಒಬ್ಬನೇ ಆತ್ಮನಾದುದರಿಂದ ಅಜ್ಞಾನಕ್ಕೆ ಬ್ರಹ್ಮನೇ ಆಶ್ರಯ ಎನ್ನುವುದು ಅನಿವಾರ್ಯ. ಆದರೆ, ದ್ವೈತದರ್ಶನದಲ್ಲಿ ಬ್ರಹ್ಮನಂತೆ ಜೀವಾತ್ಮರೂ ಪ್ರತ್ಯೇಕರಾಗಿ ಇರುವುದರಿಂದ ಅವರಲ್ಲಿ ಅಜ್ಞಾನ, ಬ್ರಹ್ಮನಲ್ಲಿ ಜ್ಞಾನ ಎಂದು ಹೇಳುವುದರಲ್ಲಿ ಯಾವ ಅನೌಚಿತ್ಯವೂ ಇಲ್ಲ.

2. ಅದ್ವೈತವಾದದಲ್ಲಿ ಬ್ರಹ್ಮ ಮಾತ್ರ ಸತ್ಯ. ಅಜ್ಞಾನವು ಅಸತ್ಯ. ಹಾಗೆ ಹೇಳಿದಾಗ ಅಜ್ಞಾನವು ಮತ್ತೊಂದು ಅಜ್ಞಾನದಿಂದ ಕಲ್ಪಿತವಾಗಬೇಕಾಗುತ್ತದೆ. ಇದರಿಂದ ಅನವಸ್ಥಾದಿದೋಷಗಳು ಬರುತ್ತವೆ. ಆದರೆ, ದ್ವೈತವಾದದಲ್ಲಿ ಅಜ್ಞಾನ ಸತ್ಯ, ಅನಾದಿ. ಅದಕ್ಕೆ ಮತ್ತೊಂದು ಅಜ್ಞಾನದ ಅಗತ್ಯವಿಲ್ಲ. ಹೀಗಾಗಿ ಅನವಸ್ಥಾ ದೋಷವಿಲ್ಲ.

3. ಅದ್ವೈತದರ್ಶನದಲ್ಲಿ ಅಜ್ಞಾನಕ್ಕೆ ವಿಷಯವಿಲ್ಲ. ಅಂದರೆ ಅಜ್ಞಾನವು ಯಾವುದರ ಜ್ಞಾನ ಬರದಂತೆ ಮಾಡುತ್ತದೆ? ಎನ್ನುವುದನ್ನು ಸಮರ್ಥಿಸಲಾಗದು. ಆದರೆ, ದ್ವೈತದರ್ಶನದಲ್ಲಿ ಜೀವನಿಗೆ ಅವನ ಜೊತೆಯಲ್ಲೇ ಇರುವ ಪರಮಾತ್ಮನ ಜ್ಞಾನ ಬರದಂತೆ ಮಾಡಲು ಈ ಅಜ್ಞಾನದ

ಆವಶ್ಯಕತೆ ಇದೆ. ಅಲ್ಲದೆ, ನಮ್ಮ ಜ್ಞಾನ ನಮಗಿದ್ದರೂ, 'ನಾವು ಅಸ್ವತಂತ್ರರು' ಎಂಬ ಜ್ಞಾನ ನಮಗೆ ಇರುವುದಿಲ್ಲ. ನಮ್ಮಲ್ಲೇ ಅಡಗಿದ ಈ ಅಸ್ವಾತಂತ್ರ್ಯಧರ್ಮದ ಜ್ಞಾನ ಬರದಂತೆ ಮಾಡಲು ಅಜ್ಞಾನದ ಅವಶ್ಯಕತೆ ಇದೆ.

4. ಅಜ್ಞಾನಕ್ಕೂ ಜೀವನಿಗೂ ಇರುವ ಸಂಬಂಧ ಸ್ವಾಭಾವಿಕವಾದುದು, ಅಜ್ಞಾನಕಲ್ಪಿತವಲ್ಲ. ಆದ್ದರಿಂದ ಜೀವನಿಗೆ ಅಜ್ಞಾನದ ಸಂಬಂಧ ಬರಬೇಕಾದರೆ ಇನ್ನೊಂದು ಅಜ್ಞಾನ ಬೇಕು ಎಂಬ ಆವಶ್ಯಕತೆ ನಮ್ಮ ವಾದದಲ್ಲಿ ಇಲ್ಲ.

5. ಸ್ವಪ್ರಕಾಶನಾದ ಜೀವನ ಅನುಭವ ಜೀವನಿಗೆ ಇದ್ದರೂ, ಅವನಲ್ಲೇ ಇರುವ ಅವನಿಗಿಂತ ಅಭಿನ್ನವಾದ ಪಾರತಂತ್ರ್ಯ, ಆನಂದ ಮುಂತಾದ ಧರ್ಮಗಳ ಅನುಭವವನ್ನು ಜಡವಾದ ಅಜ್ಞಾನ ತಡೆಯುವುದು ಹೇಗೆ? ಈ ಆಕ್ಷೇಪವೂ ನಮ್ಮ ಮತದಲ್ಲಿ ಇಲ್ಲ. ಏಕೆಂದರೆ ಅಜ್ಞಾನ ಜಡವಾದರೂ ಅದಕ್ಕೆ ಈಶ್ವರನ ಶಕ್ತಿಯ ಬೆಂಬಲ ಇದೆ. ಹೀಗಾಗಿ ಅದಕ್ಕೆ ಅಂತಹ ಶಕ್ತಿ ಬರಬಹುದು.

ಹೀಗೆ, ಈ ಶ್ಲೋಕಾರ್ಥಕ್ಕೆ ಅನೇಕ ಅರ್ಥಗಳನ್ನು ಮಾಡಿ ಟೀಕಾಚಾರ್ಯರು ದ್ವೈತದರ್ಶನದಲ್ಲಿ ಭಾವರೂಪವಾದ ಅಜ್ಞಾನವನ್ನು ಸಮರ್ಥಿಸಿದ್ದಾರೆ.

**ಅವಿದ್ಯಾದುರ್ಘಟತ್ವಂ ಚೇತ್ ಸ್ಯಾದಾತ್ಮಾಪಿ ಹಿ ತಾದೃಶಃ ।**

**ಅನ್ವಯಾರ್ಥ :**

ಅವಿದ್ಯಾದುರ್ಘಟತ್ವಂ= ಅವಿದ್ಯೆಗೆ ಅನುಪಪತ್ತಿಯೇ, (ಸ್ವಭಾವಃ) ಚೇತ್= ಸ್ವಾಭಾವಿಕವಾಗುವುದಾದರೆ, ಹಿ= ಅದೇ ಕಾರಣದಿಂದ, ಆತ್ಮಾಪಿ= ಆತ್ಮನೂ, ತಾದೃಶಃ= ಅಸತ್ಯನು, ಸ್ಯಾತ್= ಆದಾನು.

**ಭಾವಾರ್ಥ :**

ಇದುವರೆಗೆ, ಅದ್ವೈತವಾದವು ಅಂಗೀಕರಿಸಿರುವ ಅವಿದ್ಯೆಯ ಬಗ್ಗೆ ಅನೇಕ ದೋಷಗಳನ್ನು ಹೇಳಲಾಯಿತು. ಆದರೆ, ಇವಾವುವೂ ಅವಿದ್ಯೆ ಇಲ್ಲ ಎಂದು ಸಾಧಿಸಲು ಉಪಯೋಗವಾಗುವುದಿಲ್ಲ. ಏಕೆಂದರೆ, ಅವಿದ್ಯೆ ಸತ್ಯವಾದರೆ ಅದಕ್ಕೆ ಆಶ್ರಯ, ವಿಷಯಗಳ ಅನಿವಾರ್ಯತೆ ಇರಬೇಕು. ಆದರೆ ಅವಿದ್ಯೆ ಅಸತ್ಯವಾದುದು. ಅಸತ್ಯವಾದುದಕ್ಕೆ ದೋಷಗಳು ಬಂದಷ್ಟೂ ಅದರ ಅವಾಸ್ತವತೆ ದೃಢವಾಗುತ್ತದೆ. ಯಾವ ದೋಷಗಳೂ ಇಲ್ಲದಿದ್ದರೆ ಅವಿದ್ಯೆ ಅಸತ್ಯವಾಗುವುದು ಹೇಗೆ? ಆದ್ದರಿಂದ ದೋಷಗಳು ಅವಿದ್ಯೆಗೆ ಭೂಷಣವೇ, ಹೊರತು, ದೂಷಣವಲ್ಲ. ಇದು ಅದ್ವೈತವಾದದ ಉತ್ತರ.

ಆದರೆ, ಇದು ಸರಿಯಲ್ಲ. ಹಾಗಿದ್ದರೆ ಆತ್ಮ ಎಂಬ ಒಂದು ಸತ್ಯವಾದ ತತ್ತ್ವವನ್ನು ಒಪ್ಪುವುದೇ ಅನಾವಶ್ಯಕ. ಬೌದ್ಧರಂತೆ 'ಯಾವುದೂ ಸತ್ಯವಲ್ಲ' ಎಂದೇ ಹೇಳಬಹುದು. ಅದ್ವೈತದರ್ಶನ ಅವಿದ್ಯೆಗೆ ಅಧಿಷ್ಠಾನವಾಗಿ ಮತ್ತು ಸಾಧಕವಾಗಿ ಆತ್ಮ ಎಂಬ ಸತ್ಯವಸ್ತುವನ್ನು ಒಪ್ಪಿಕೊಂಡಿದೆ. ಒಂದು ವೇಳೆ ಇದಾವುದರ ಅಗತ್ಯವೂ ಅವಿದ್ಯೆಗೆ ಇಲ್ಲವೆಂದರೆ ಆತ್ಮತತ್ತ್ವವೂ, ಜಗತ್ತಿನಂತೆಯೇ ಮಿಥ್ಯೆ ಏಕಾಗಬಾರದು?

**ಅತೋಽಧಿಕಾರಿವಿಷಯಫಲಯೋಗಾದಿವರ್ಜಿತಮ್ ।**
**ಅನಂತದೋಷದುಷ್ಟಂ ಚ ಹೇಯಂ ಮಾಯಾಮತಂ ಶುಭೈಃ ॥**

**ಅನ್ವಯಾರ್ಥ :**

ಅತಃ= ಮಾಯಾವಾದದಂತೆ 'ಅವಿದ್ಯೆ' ಎಂಬ ಮೂಲಭೂತತತ್ತ್ವವನ್ನೇ ಸಮರ್ಥಿಸಲು ಸಾಧ್ಯವಾಗದಿರುವುದರಿಂದ, ಅಧಿಕಾರಿವಿಷಯಫಲ-ಯೋಗಾದಿವರ್ಜಿತಂ= ಶಾಸ್ತ್ರವನ್ನು ಓದಲು ಅರ್ಹನಾದ ಯೋಗ್ಯವ್ಯಕ್ತಿ, ಶಾಸ್ತ್ರವು ಪ್ರತಿಪಾದಿಸಬೇಕಾದ ವಿಷಯ, ಆ ವಿಷಯದ ಜ್ಞಾನದಿಂದ ಪಡೆಯಬಹುದಾದ ಫಲ, ಈ ಮೂರಕ್ಕೂ ಪರಸ್ಪರ ಸಂಬಂಧ (ಯೋಗ) ಈ ಅನುಬಂಧ ಚತುಷ್ಟಯಗಳಿಂದ ರಹಿತವಾದ, ಮಾಯಾಮತಂ= ಮಾಯಾವಾದ ಸಿದ್ಧಾಂತವು, ಅನಂತದೋಷದುಷ್ಟಂ= ಅಪರಿಮಿತವಾದ ದೋಷಗಳಿಂದ ಅಸಮಂಜಸವಾಗಿದೆ. ಅತಃ= ಆದ್ದರಿಂದ, ಶುಭೈಃ= ಸಜ್ಜನರಿಂದ, ಹೇಯಂ= ತ್ಯಾಜ್ಯವಾದುದು.

**ಭಾವಾರ್ಥ :**

ಶಾಸ್ತ್ರಕ್ಕೆ ಅಧಿಕಾರಿ, ವಿಷಯ, ಪ್ರಯೋಜನ, ಸಂಬಂಧ ಈ ನಾಲ್ಕು ಇರಬೇಕು. ಇವುಗಳಿಗೆ ಅನುಬಂಧಚತುಷ್ಟಯಗಳೆಂದು ಹೆಸರು. ತತ್ತ್ವದ ಅಜ್ಞಾನವಿದ್ದವನು ಶಾಸ್ತ್ರ ಓದಲು ಅಧಿಕಾರಿ. ಅವನಿಗೆ ತಿಳಿಯದ ವಿಷಯ ಶಾಸ್ತ್ರಪ್ರತಿಪಾದ್ಯ. ಅದನ್ನು ತಿಳಿದುದರಿಂದ ಸಿಗುವ ಫಲ ಪ್ರಯೋಜನ. ಇವೆಲ್ಲವೂ ಅಜ್ಞಾನವನ್ನು ಅವಲಂಬಿಸಿವೆ. ಹಿಂದೆ ಹೇಳಿದಂತೆ ಮಾಯಾವಾದದಲ್ಲಿ ಅಜ್ಞಾನವನ್ನೇ ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಬ್ರಹ್ಮಮೀಮಾಂಸಾ, ಉಪನಿಷತ್ತು ಮೊದಲಾದ ಶಾಸ್ತ್ರಗಳು ಯಾರಿಗೆ ಏನನ್ನು ಹೇಳಬೇಕಾಗಿದೆ ಎಂದು ಸಾಧಿಸಲು ಅದ್ವೈತದರ್ಶನದಲ್ಲಿ ಸಾಧ್ಯವಿಲ್ಲ. ಹೀಗಾಗಿ ಆ ದರ್ಶನ ಶ್ರೇಯಸ್ಸನ್ನು ಬಯಸುವವನಿಗೆ ಅಗ್ರಾಹ್ಯವಾಗಿದೆ.